ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ:- ಅಧ್ಯಕ್ಷರೇ, ಮಾಯಸಂದ್ರ ಹೋಬಳಿ ಮತ್ತು ದಂಡಿನಶಿವರ ಹೋಬಳಿಗಳಿಗೂ ಸಂಬಂಧ ಇಲ್ಲ. ಈ ಹೊಸೂರು ಮತ್ತು ಕೋಡಿಹಳ್ಳಿ ದಂಡಿನಶಿವರ ಹೋಬಳಿಗೇ ಸೇರುತ್ತವೆ. ನಾನು ಆ ಕ್ಷೇತ್ರದಲ್ಲಿ ಪ್ರವಾಸ ಮಾಡುವಂಥ ಶಾಸಕನಾಗಿ ಹೇಳುತ್ತಿದ್ದೇನೆ. ಈ ಹಳ್ಳಿಗಳು ದಂಡಿನಶಿವರ ಹೋಬಳಿಗೇ ಸೇರುತ್ತವೆ. ತಮ್ಮ ಅಧಿಕಾರಿಗಳು, ತಪ್ಪು ಮಾಹಿತಿಯನ್ನು ತಮಗೆ ಕೊಟ್ಟಿರುತ್ತಾರೆ. ದಯಮಾಡಿ, ಮತ್ತೊಮ್ಮೆ ಪರಿಶೀಲನೆ ಮಾಡಿ, ಸರಿಯಾದ ಮಾಹಿತಿ ತರಿಸಿಕೊಂಡು ನೋಡಬೇಕು. ಹೊಸೂರು, ಕೋಡಿಹಳ್ಳಿ ಯಾವುದೇ ಕಾರಣಕ್ಕೂ ಮಾಯಸಂದ್ರ ಹೋಬಳಿಗೆ ಸೇರುವುದಿಲ್ಲ. ಅವುಗಳನ್ನೆಲ್ಲಾ ಸೇರಿಸಿಯೇ 5 ಸಾವಿರ ಜನಸಂಖ್ಯೆ ಬರುವುದರಿಂದ ನಾನು ಈ ಪ್ರಶ್ನೆ ಹಾಕಿರತಕ್ಕಂತಾದ್ದು ದಯಮಾಡಿ, ಸೂಕ್ತವಾದ ಉತ್ತರವನ್ನು ತರಿಸಿಕೊಂಡು, ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ.

ಡಾ॥ ಎ. ಬಿ. ಮಾಲಕರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೇ, ಈ ತುರುವೇಕೆರೆ ತಾಲ್ಲೂಕಿನ ಜನಸಂಖ್ಯೆ 1ಲಕ್ಷದ 68 ಸಾವಿರದ 338 ಇದೆ. ಅದಕ್ಕನುಗುಣವಾಗಿ 33 ಆರೋಗ್ಯ ಉಪಕೇಂದ್ರಗಳನ್ನು ಸರ್ಕಾರ ಈಗಾಗಲೇ ತೆರೆದಿದೆ. 5 ಸಾವಿರ ಜನಸಂಖ್ಯೆ ನಿಯಮಕ್ಕೆ ಒಳಪಟ್ಟು ಈ ಗಾಗಲೇ ಸಾಕಷ್ಟು ಇವೆ.

ಸ್ವಚ್ಛ ಗ್ರಾಮಗಳ ಯೋಜನೆಯ ನೀತಿ ನಿಯಮಗಳು

ಶ್ರೀ ಬನ್ನಿಕೋಡ್ ಬಿ.ಹೆಚ್. (ಹಿರೇಕೆರೂರು):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸ್ವಚ್ಛಗ್ರಾಮಗಳ ಯೋಜನೆಯ ನೀತಿ ನಿಯಮಗಳೇನು?

ಆ) 2000-2001ನೇ ಸಾಲಿಗೆ ರಾಜ್ಯದಲ್ಲಿ ಒಟ್ಟು ಎಷ್ಟು ಸ್ವಚ್ಛ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು ಗುರಿ ನಿಗದಿಪಡಿಸಲಾಗಿದೆ ಈ ಬಗ್ಗೆ ತಗಲುವ ಅಂದಾಜು ಮೊತ್ತವೆಷ್ಟು?

ಇ) ಈ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಆಳವಡಿಸಿದ ಗ್ರಾಮಗಳ ಸಂಖ್ಯೆ ಎಷ್ಟು? ಅವುಗಳಿಗೆ ತಗಲುವ ವೆಚ್ಚವೆಷ್ಟು? (ಜಿಲ್ಲಾವಾರು ವಿವರ ನೀಡುವುದು: ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು):-

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ರಾಜ್ಯದಲ್ಲಿ ಒಟ್ಟು 1000 ಗ್ರಾಮಗಳನ್ನು ಸ್ವಚ್ಛ ಗ್ರಾಮಗಳನ್ನಾಗಿ ಅಭಿವೃದ್ಧಿಗೊಳಿಸಲು ಗುರಿ ಇಟ್ಟುಕೊಳ್ಳಲಾಗಿದೆ.

ಈ ಯೋಜನೆಯ ಅಂದಾಜು ಮೊತ್ತ ರೂ. 200.00 ಕೋಟಿಗಳು.

ಇ) ಈ ಯೋಜನೆಯಡಿ, ಇಲ್ಲಿಯವರೆಗೆ ರಾಜ್ಯದಲ್ಲಿ 687 ಗ್ರಾಮಗಳ ಆಯ್ಕೆಗಾಗಿ ಠೇವಣಿಸಹಿತ (ಪ್ರತಿ ಗ್ರಾಮಕ್ಕೆ ರೂ. 1.00 ಲಕ್ಷ ದಂತೆ) ಅರ್ಜಿಗಳು ಬಂದಿದ್ದು, ಪ್ರತಿಯೊಂದು ಗ್ರಾಮಕ್ಕೆ ಸರಾಸರಿ ರೂ. 20.00 ಲಕ್ಷಗಳು ವೆಚ್ಚವಾಗಲಿದೆ (ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.)

ಅನುಬಂಧ- 1

ಸ್ವಚ್ಛಗ್ರಾಮ ಯೋಜನೆಯ ನೀತಿ ನಿಯಮಗಳು:

ಸ್ವಚ್ಛಗ್ರಾಮ ಯೋಜನೆಯು ಈ ಕೆಳಕಂಡ ಐದು ಅಂಶಗಳನ್ನು (ಪಂಚಸೂತ್ರಗಳನ್ನು) ಒಳಗೊಂಡಿದೆ.

ಅ) ಗ್ರಾಮದ ಒಳರಸ್ತೆ ಮತ್ತು ಬೀದಿಗಳ ಮೇಲ್ಮೈಯನ್ನು ಉತ್ತಮಪಡಿಸುವುದು.

ಆ) ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಪ್ರತಿ ಬೀದಿಯಲ್ಲೆಯೂ ಚರಂಡಿಗಳ ನಿರ್ಮಾಣ.

ಇ) ಸಾಮೂಹಿಕ ಮಿಶ್ರಗೊಬ್ಬರದ ಅಂಗಳವನ್ನು (ಕಮ್ಯೂನಿಟಿ ಕಾಂಪೋಸ್ಟ್) ಒದಗಿಸಿ ಗ್ರಾಮದ ವಾಸಸ್ಥಳಗಳಿಂದ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವುದು.

ಈ) ಗ್ರಾಮದ ಎಲ್ಲಾ ಮನೆಗಳಿಗೂ ಹೊಗೆರಹಿತ ಒಲೆಗಳನ್ನು ಒದಗಿಸುವುದು.

ಉ) ಗ್ರಾಮದ ಎಲ್ಲಾ ಜನತೆಗಾಗಿ, ಕೌಟುಂಬಿಕ ಶೌಚಾಲಯಗಳ: ಸಾಮೂಹಿಕ ಶೌಚಾಲಯ ಸಂಕೀರ್ಣಗಳ ನಿರ್ಮಾಣ ಮತ್ತು ಶಾಲಾ ಶೌಚಾಲಯಗಳ ನಿರ್ಮಾಣ.

ಸ್ವಚ್ಛಗ್ರಾಮ ಯೋಜನೆಯಡಿ, ಗ್ರಾಮಪಂಚಾಯತಿಯು (1) ಯೋಜನೆಯ ತಯಾರಿಕೆ: ಅನುಷ್ಠಾನದಲ್ಲಿ ಗ್ರಾಮಸ್ಥರ ಭಾಗವಹಿಸುವಿಕೆ ಮತ್ತು ಯೋಜನಾ ವೆಚ್ಚದ ಶೇಕಡ 10 ರಷ್ಟು ವಂತಿಗೆಯನ್ನು ಗ್ರಾಮಸ್ಥರಿಂದ ಸಂಗ್ರಹಿಸುವ ಜವಾಬ್ದಾರಿಯನ್ನು ಹಾಗೂ (2) ಯೋಜನೆ ಪೂರ್ಣಗೊಂಡ ನಂತರ ಗ್ರಾಮಕ್ಕೆ ಒದಗಿಸಲಾದ ಸೌಲಭ್ಯಗಳ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಮುಂದೆ ಬರುವಂತಹ ಗ್ರಾಮಗಳನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ.

ಸ್ವಚ್ಛಗ್ರಾಮ ಯೋಜನೆಯ ಸೌಲಭ್ಯವನ್ನು ಪಡೆಯಲು ಗ್ರಾಮಪಂಚಾಯತಿಯು ಈ ಕೆಳಕಂಡ ಇತರ ಷರತ್ತುಗಳನ್ನು ಈಡೇರಿಸಬೇಕಾಗುತ್ತದೆ.

1. ಗ್ರಾಮಪಂಚಾಯತಿಯು ತನ್ನ ಪಾಲಿನ ಶೇಕಡಾ 50 ರಷ್ಟು ಹಣವನ್ನು ಗ್ರಾಮಸ್ಥರಿಂದ ಸಂಗ್ರಹಿಸಿ ಜಿಲ್ಲಾ ಪಂಚಾಯತಿಗೆ ತೇವಣಿ ಮಾಡುವ ಮೂಲಕ ತನ್ನ ಕೋರಿಕೆಯನ್ನು ನೋಂದಣಿ ಮಾಡುವುದು.

2. ಗ್ರಾಮಪಂಚಾಯತಿಯು ಗ್ರಾಮಸಭೆಯೊಡನೆ ಸಮಾಲೋಚಿಸಿ ಗ್ರಾಮಕ್ಕೆ ಒದಗಿಸಲಾಗುವ ಸೌಲಭ್ಯಗಳ ನಿರ್ವಹಣೆಗಾಗಿ ಬೇಕಾಗುವ ಪೂರ್ತಿ ವೆಚ್ಚವನ್ನು ಗ್ರಾಮಸ್ಥರಿಂದ ಕರವಸೂಲಿ ಮಾಡುವ ಮೂಲಕ ಭರಿಸಲಾಗುವ ಕುರಿತು ಒಂದು ಠರಾವು ಮಾಡತಕ್ಕದ್ದು.

3. ಯೋಜನೆಯಡಿ ನಿರ್ಮಿಸಲಾಗುವ ಸಾಮೂಹಿಕ ಶೌಚಾಲಯಗಳನ್ನು ಪ್ರತಿದಿನವೂ ಸ್ವಚ್ಛಗೊಳಿಸುವ ಬಗ್ಗೆ ಹಾಗೂ ಕನಿಷ್ಠ ಒಂದು ವಾರಕ್ಕೊಮ್ಮೆ ರಸ್ತೆಗಳನ್ನು: ಎರಡು ವಾರಗಳಿಗೊಮ್ಮೆ ಚರಂಡಿಗಳನ್ನು ಸ್ವಚ್ಚಗೊಳಿಸುವ ಅಗತ್ಯ ವ್ಯವಸ್ಥೆಯನ್ನು ಕಲ್ಪಿಸಲು ಗ್ರಾಮಪಂಚಾಯತಿಯು ಒಪ್ಪಿಕೊಳ್ಳತಕ್ಕದ್ದು.

4. ಗ್ರಾಮಪಂಚಾಯತಿಯು ಸಾರ್ವಜನಿಕ ನಳಗಳು: ಸಿಸ್ಪರ್ನ್‌ಗಳು: ಕೈಪಂಪುಗಳ ಸುತ್ತಮುತ್ತಲಿನ ಸ್ಥಳಗಳನ್ನು ಸ್ವಚ್ಛವಾಗಿಟ್ಟು ನೀರು ನಿಲ್ಲದಂತೆ ನೋಡಿಕೊಳ್ಳುವುದು ಹಾಗೂ ವರ್ಷಕ್ಕೊಮ್ಮೆ ಕುಡಿಯುವ ನೀರಿನ ಮಾದರಿಗಳ ಗುಣಮಟ್ಟ ಪರೀಕ್ಷೆಯನ್ನು ಮಾಡಿಸಲು ಒಪ್ಪಿಕೊಳ್ಳತಕ್ಕದ್ದು.

5. ಗ್ರಾಮಪಂಚಾಯತಿಯು ಗ್ರಾಮದ ವಾಸಸ್ಥಳಗಳಲ್ಲಿ ಯಾವುದೇ ತಿಪ್ಪೆಗುಂಡಿಗಳು: ಸಗಣಿ- ಕಸದ ರಾಶಿಗಳು ಇಡತಕ್ಕದ್ದಲ್ಲವೆಂಬ ಬಗ್ಗೆ ಒಂದು ನಿಯಮಾವಳಿಗಳನ್ನು ಜಾರಿಗೊಳಿಸುವುದು ಮತ್ತು ಯೋಜನೆ ಮಂಜೂರಾದ ಒಂದು ತಿಂಗಳಲ್ಲಿ ವಾಸಸ್ಥಳದ ಅನೈರ್ಮಲ್ಯ ತಿಪ್ಪೆಗುಂಡಿಗಳನ್ನು ಗ್ರಾಮದ ಹೊರವಲಯಕ್ಕೆ ಸಾಗಿಸಲು ಒಪ್ಪಿಕೊಳ್ಳತಕ್ಕದ್ದು.

6. ಗ್ರಾಮಪಂಚಾಯತಿಯು ಗ್ರಾಮಕ್ಕೆ ಒದಗಿಸಲಾದ ಸೌಲಭ್ಯಗಳ ಅಂದರೆ ರಸ್ತೆ, ಚರಂಡಿ, ಸಾಮೂಹಿಕ ಮಿಶ್ರ ಗೊಬ್ಬರದ ಅಂಗಳ ಮತ್ತು ಸಾಮೂಹಿಕ ಶೌಚಾಲಯಗಳ ನಿರ್ವಹಣೆಯ ವೆಚ್ಚವನ್ನು ಭರಿಸಲು ವಾರ್ಷಿಕ ಆಯವ್ಯಯವನ್ನು ತಯಾರಿಸಿಕೊಳ್ಳತಕ್ಕದ್ದು.

<u>ಯೋಜನೆಯ ಅಂದಾಜುಮೊತ್ತ ಮತ್ತು ಗ್ರಾಮೀಣ ಸಮುದಾಯದಿಂದ ಭರಿಸಬೇಕಾದ ವಂತಿಗೆ</u>

1. ಸಾಮಾನ್ಯವಾಗಿ 400-500 ಮನೆಗಳಿರುವ ಒಂದು ಗ್ರಾಮದ ಸಂಪೂರ್ಣ ನೈರ್ಮಲೀಕರಣ (ಸ್ವಚ್ಛಗ್ರಾಮ) ಯೋಜನೆಯ ಸರಾಸರಿ ಅಂದಾಜುಮೊತ್ತ ರೂ. 20.00 ಲಕ್ಷಗಳಾಗುತ್ತದೆ. ಈ ಯೋಜನೆಯಡಿ ತಲಾ ವೆಚ್ಚ ರೂ. 500-800 ಇರತಕ್ಕದ್ದು.

2. ಯೋಜನೆಯ ಅಂದಾಜುಮೊತ್ತ ರೂ. 20.00 ಲಕ್ಷಗಳ ಮಿತಿಯೊಳಗೆ ಇದ್ದಲ್ಲಿ ಯೋಜನೆಯ ಅಂದಾಜಿನ ಶೇಕಡ 10 ರಷ್ಟು ಹಣವನ್ನು ಸಮುದಾಯ ವಂತಿಗೆಯಿಂದ ಭರಿಸತಕ್ಕದ್ದು.

3. ಯೋಜನೆಯ ಅಂದಾಜುಮೊತ್ತ ರೂ. 20.00 ಲಕ್ಷಗಳಿಗೆ ಮೀರಿದಲ್ಲಿ, ರೂ. 20.00 ಲಕ್ಷ ಅಂದಾಜುಮೊತ್ತಕ್ಕೆ ಶೇಕಡ 10ರಂತೆ ರೂ. 2.00 ಲಕ್ಷಗಳನ್ನು ಮತ್ತು ರೂ. 20.00 ಲಕ್ಷಗಳಿಗಿಂತ ಮೇಲ್ಪಟ್ಟ ಅಂದಾಜುಮೊತ್ತದಲ್ಲಿ ಶೇಕಡ 50 ರಷ್ಟು ಹಣವನ್ನು ಹೆಚ್ಚುವರಿಯಾಗಿ ಸಮುದಾಯ ವಂತಿಗೆಯಿಂದ ಭರಿಸತಕ್ಕದ್ದು.

4. ಸ್ವಚ್ಛಗ್ರಾಮ ಯೋಜನೆಯಡಿ ತಯಾರಿಸಲ್ಪಡುವ ಅಂದಾಜಿನ ಒಟ್ಟು ಮೊತ್ತ ರೂ. 40.00 ಲಕ್ಷಗಳಿಗೆ ಮೀರಕೂಡದು.

ಅನುಬಂಧ-2

ಸ್ವಚ್ಛಗ್ರಾಮ ಯೋಜನೆಯಡಿ ಗ್ರಾಮಗಳ ಆಯ್ಕೆಗಾಗಿ ಜಿಲ್ಲಾವಾರು ಬಂದಿರುವ ಬೇಡಿಕೆಗಳ ವಿವರ

ಕ್ರ.ಸಂಖ್ಯೆ	ಜಿಲ್ಲಾ ಪಂಚಾಯತ್	ತೇವಣಿ ಸಹಿತ ಬಂದಿರುವ ಅರ್ಜಿಗಳ ಸಂಖ್ಯೆ
1	2	3
1.	ಬೆಂಗಳೂರು (ನಗರ)	20
2.	ಬೆಂಗಳೂರು(ಗ್ರಾಮಾಂತರ)	75
3.	ಚಿತ್ರದುರ್ಗ	12
4.	ದಾವಣಗೆರೆ	29
5.	ಕೋಲಾರ	-
6.	ಶಿವಮೊಗ್ಗ	6
7.	ತುಮಕೂರು	-
8.	ಚಿಕ್ಕಮಗಳೂರು	30
9.	ದಕ್ಷಿಣ ಕನ್ನಡ	8
10.	ಉಡುಪಿ	27
11.	ಹಾಸನ	3
12.	ಕೊಡಗು	5
13.	ಮಂಡ್ಯ	14
14.	ಮೈಸೂರು	-
15.	ಚಾಮರಾಜನಗರ	23
16.	ಬೆಳಗಾಂವ	127
17.	ಬಿಜಾಪುರ	66
18.	ಬಾಗಲಕೋಟೆ	7

1	2	3
19.	ಧಾರವಾಡ	6
20.	ಗದಗ	18
21.	ಹಾವೇರಿ	38
22.	ಉತ್ತರ ಕನ್ನಡ	45
23.	ಬಳ್ಳಾರಿ	16
24.	ಬೀದರ್	-
25.	ಗುಲ್ಬರ್ಗಾ	69
26.	ರಾಯಚೂರು	41
27.	ಕೊಪ್ಪಳ	2
	ಒಟ್ಟು	**687**

ಶ್ರೀ ಬಿ.ಹೆಚ್.ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ರಾಜ್ಯದ ಒಂದು ಸಾವಿರ ಗ್ರಾಮಗಳನ್ನು ಸ್ವಚ್ಛ ಗ್ರಾಮಗಳನ್ನಾಗಿ ಆಯ್ಕೆ ಮಾಡಿಕೊಳ್ಳಲು ಗುರಿ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ಕೇವಲ 687 ಗ್ರಾಮಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ. ಇನ್ನೂ ಗ್ರಾಮಗಳ ಆಯ್ಕೆ ಪೂರ್ಣವಾಗಿಲ್ಲ. ನಂತರ ಈವರೆಗೆ ಏನಾದರೂ ಈ ಬಗ್ಗೆ ಹಣವನ್ನು ಖರ್ಚು ಮಾಡಲಾಗಿದೆಯೇ ಹೇಗೆ? ಕಾರ್ಯಕ್ರಮ ಪ್ರಾರಂಭವಾಗಿದೆಯೋ, ಇಲ್ಲವೋ? ಇನ್ನೂ ಆಯ್ಕೆಯಾಗತಕ್ಕ ಗ್ರಾಮಗಳನ್ನು ಯಾವಾಗ ಆಯ್ಕೆ ಮಾಡುತ್ತೀರಿ? ಮತ್ತೆ 10 ಪರ್ಸೆಂಟ್ ಗ್ರಾಮದ ಜನರು ವಂತಿಕೆಯನ್ನು ಕೊಡಬೇಕೆಂದು ಇದೆ. ಅನೇಕ ಕಡೆ ಸಂಸತ್ ಸದಸ್ಯರ ನಿಧಿಯಿಂದ ಈ 10 ಪರ್ಸೆಂಟ್ ಹಣವನ್ನು ಭರಿಸಿದ್ದಾರೆ. ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವುದಕ್ಕೆ ಈ ನೀತಿಯಲ್ಲಿ ಅವಕಾಶ ಇದೆಯೋ ಇಲ್ಲವೋ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಂ. ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಸಾವಿರ ಗ್ರಾಮಗಳಲ್ಲಿ ಈ ಕಾರ್ಯಕ್ರಮವನ್ನು ನಾವು ಅನುಸರಿಸಬೇಕೆಂಬುದು ನಿಜ. ಈಗಾಗಲೇ ಉತ್ತರದಲ್ಲಿ ಹೇಳಿರುವ ಹಾಗೆ 687 ಹಳ್ಳಿಗಳಲ್ಲಿ ಒಂದು ಲಕ್ಷ ಕಾಂಟ್ರಿಬ್ಯೂಷನ್ ಕೊಟ್ಟಿರುವುದರಿಂದ ಈ ಹಳ್ಳಿಗಳು ರಿಜಿಸ್ಟರ್ ಆಗಿವೆ. ಏಕೆಂದರೆ, ಎರಡು ಲಕ್ಷ ಕಾಂಟ್ರಿಬ್ಯೂಷನ್ ಕೊಟ್ಟಿರುವುದರಿಂದ ಈ ಹಳ್ಳಿಗಳು ರಿಜಿಸ್ಟರ್ ಆಗಿವೆ. ಏಕೆಂದರೆ, ಎರಡು ಲಕ್ಷ ಕಾಂಟ್ರಿಬ್ಯೂಷನ್ ಅವರು ಕೊಡಬೇಕಾಗುತ್ತದೆ. ಅದರಲ್ಲಿ ಒಂದು ಲಕ್ಷ ಯಾರು ಕೊಡುತ್ತಾರೆ ಅವರ ಹೆಸರನ್ನು ನಾವು ರಿಜಿಸ್ಟರ್ ಮಾಡುತ್ತೇವೆ. ಹೀಗಾಗಿ ಅವರು ಹಣದ ಮೂಲಕ ಅಥವಾ ಕೆಲಸದ ಮೂಲಕ ಇನ್ನೂ ಒಂದು ಲಕ್ಷ ಕೊಡಬೇಕಾಗುತ್ತದೆ. ಈ ಹಣ ಕೊಟ್ಟ ತಕ್ಷಣ ಈ ಕೆಲಸ ಪ್ರಾರಂಭವಾಗುವುದಿಲ್ಲ. ಏಕೆಂದರೆ, ಇದಕ್ಕೆ ಬೇಕಾಗುವಂಥ ಬೇರೆ ವ್ಯವಸ್ಥೆಯನ್ನು ನಾವು ಮಾಡಬೇಕಾಗುತ್ತದೆ ಏಜೆನ್ಸಿಯನ್ನೂ ಗ್ರಾಮಸ್ಥರೇ ಮಾಡಬೇಕಾಗುತ್ತದೆ. ಒಂದು ಕಮಿಟಿ ಮಾಡಬೇಕಾಗುತ್ತದೆ. ಅನಂತರ ಯಾವ ಏಜೆನ್ಸಿ

ಮುಖಾಂತರ ಕೆಲಸಗಳನ್ನು ಮಾಡಿಸಬೇಕು, ಎನ್ನುವ ಬಗ್ಗೆ ಒಂದು ತೀರ್ಮಾನ ಮಾಡಬೇಕಾಗುತ್ತದೆ. ಈ ಪ್ರೋಸಸ್ ಏನಿದೆ ಮತ್ತು ಎಸ್ಟಿಮೇಟ್ ಮಾಡುವಾಗ ಪ್ರತಿಯೊಂದು ಬೀದಿ ಬೀದಿಗೂ ಹೋಗಿ ನೋಡಿ, ಯಾವ ಬೀದಿಯಲ್ಲಿ ನಾವು ಪಕ್ಕಾ ರಸ್ತೆ ಮಾಡಬೇಕು, ಎಂಬುದನ್ನು ಜನರು ತೀರ್ಮಾನ ಮಾಡಬೇಕಾಗುತ್ತದೆ. ಇದು ಅಫಿಷಿಯಲ್ ಕಾರ್ಯಕ್ರಮ ಅಲ್ಲ, ಇಲ್ಲಿ ಕುಳಿತುಕೊಂಡು ಮಾಡುವುದಿಲ್ಲ. ಅದಕ್ಕೋಸ್ಕರ ಸ್ವಲ್ಪ ವಿಳಂಬವಾದರೂ ಚಿಂತೆಯಿಲ್ಲ, ಜನರ ಅಭಿಪ್ರಾಯದ ಪ್ರಕಾರ ನಡೆಯಲಿ ಎಂಬುದು ನಮ್ಮ ಆಸೆ. ಇನ್ನೂ ಒಂದು ಪ್ರಶ್ನೆಯನ್ನು ತಾವು ಕೇಳಿದ್ದೀರಿ. ಈ ಎರಡು ಲಕ್ಷದಲ್ಲಿ, ಒಂದು ಲಕ್ಷ ರೂಪಾಯಿಗಳನ್ನು ಎಂ.ಪಿ.ನಿಧಿಯಲ್ಲಿ ಕೊಟ್ಟರೆ ಒಳ್ಳೆಯದು. ಇವತ್ತು ಈ ಕಾರ್ಯಕ್ರಮ ಪ್ರಾರಂಭವಾಗಲಿ ಎಂಬುದೇ ನಮ್ಮ ಉದ್ದೇಶವಿರುವುದರಿಂದ, ಎಂ.ಪಿ. ಕಾರ್ಯಕ್ರಮ ಕೂಡ ಡೆವಲಪ್‌ಮೆಂಟ್‌ಗೋಸ್ಕರ ಕೊಡುತ್ತಾ ಇರುವುದರಿಂದ, ನಾವು ಆಕ್ಷೇಪಣೆಯನ್ನು ಇಲ್ಲಿಯವರೆಗೆ ಎತ್ತಲಿಲ್ಲ ಮತ್ತು ಎತ್ತುವ ವಿಚಾರ ಕೂಡ ಇಲ್ಲ.

11.30 ಎ.ಎಂ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಂದು ವಿಷಯವನ್ನು ಕ್ಲಿಯರ್ ಮಾಡಬೇಕು. ಆ ಆರ್ಡರ್‌ನಲ್ಲಿ ಹುಡ್ಕೋದಿಂದ ಸಾಲ ಎಂದು ಹೇಳಿದ್ದಾರೆ. ಆ ಸಾಲವನ್ನು ಪಂಚಾಯತಿ ಭರಿಸುತ್ತದೆಯೋ ಅಥವಾ ಸರ್ಕಾರ ಭರಿಸುತ್ತದೆಯೋ ಆಮೇಲೆ ಆ ಕೆಲಸವನ್ನು ಆ ಊರಿನವರು ಕೂಡಿ ಮಾಡಬಹುದೋ ಅಥವಾ ಯಾವ ಏಜೆನ್ಸಿ ಕೊಡಬಹುದು ಎನ್ನುವುದನ್ನು ಹೇಳಿದಿರಿ. ಆದರೆ ಬೇರೆ ಏಜೆನ್ಸಿಗೆ ಕೊಡುವುದಕ್ಕಿಂತ ಆ ಕೆಲಸವನ್ನು ಊರಿನವರು ಸೇರಿ ಮಾಡಿದರೆ ಒಳ್ಳೆಯದು. ಏಕೆಂದರೆ ಆ ಊರಿನವರು ಎರಡು ಲಕ್ಷ ಹಣ ಕೊಟ್ಟಿರುತ್ತಾರೆ. ಸುಮ್ಮನೆ ಬೇರೆ ಯಾವುದಾದರೂ ಏಜೆನ್ಸಿಗೆ ಕೊಟ್ಟರೆ ಅವರು 20 ಪರ್ಸೆಂಟ್ ಹಣ ತಿಂದು ಬಿಡುತ್ತಾರೆ. ಆ ಕಾರಣದಿಂದ ಆ ಕೆಲಸವನ್ನು ಊರಿನವರು ಮಾಡಲಿಕ್ಕೆ ಕೊಡುತ್ತೀರೋ ಹೇಗೆ ಎನ್ನುವುದನ್ನು ಕ್ಲಿಯರ್ ಮಾಡಿ.

ಶ್ರೀ ಎಂ. ವೈ ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಹುಡ್ಕೋ ಹಣದ ಬಗ್ಗೆ ಯಾವ ಗೊಂದಲ ಇಲ್ಲ. ತಮಗೆ ಗೊತ್ತಿರುವ ಹಾಗೆ ಸಾವಿರ ಗ್ರಾಮಗಳಲ್ಲಿ ಈ ಯೋಜನೆಯನ್ನು ಅನುಸರಿಸಬೇಕಾದರೆ 200 ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಒಂದು ಹಳ್ಳಿಗೆ 20 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ನಮ್ಮ ಬಜೆಟ್‌ನಲ್ಲಿ ಇಟ್ಟಿರುವುದು 20 ಕೋಟಿ ಮಾತ್ರ. ಇನ್ನು 160 ಕೋಟಿ ಹುಡ್ಕೋದಿಂದ ಬರಬೇಕಾಗುತ್ತದೆ. ಅದಕ್ಕೆ ಸರ್ಕಾರ ಗ್ಯಾರೆಂಟಿ ಕೊಡುತ್ತದೆ. ಇದು ಗ್ರಾಮದ ಮೇಲೆ ಬೀಳುವುದಿಲ್ಲ. ಈ ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕೆ ಲ್ಯಾಂಡ್ ಆರ್ಮಿಯವರಿಗೆ ವಹಿಸಿದ್ದೇವೆ. ಲ್ಯಾಂಡ್ ಆರ್ಮಿಯವರು ಕಡಿಮೆ ಖರ್ಚಿನಲ್ಲಿ ಕೆಲಸ ಮಾಡಬೇಕು, ಇದಕ್ಕಿಂತ ಕಡಿಮೆ ಖರ್ಚಿನಲ್ಲಿ ಯಾರೂ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ನಾವು ಗಮನಿಸಿ, ಈ ಕೆಲಸವನ್ನು ಅವರಿಗೆ ವಹಿಸಿದ್ದೇವೆ. ಆದರೂ ಕೂಡ ಈ ಕೆಲಸವನ್ನು ಇನ್ನೊಬ್ಬರು ಮಾಡುತ್ತಾರೆಂದು ಮುಂದೆ ಬಂದರೆ ಅವರು ಜಿಲ್ಲಾ ಪಂಚಾಯಿತಿ ಇಂಜಿನೀಯರಿಂಗ್ ವಿಭಾಗ ಏನು ಇದೆ ಅವರ ಮೂಲಕ ಮಾಡಬಹುದು. ಅವರ ಮೂಲಕ ಈ ಕೆಲಸವನ್ನು ಮಾಡಬೇಕಾದರೆ ಟೆಂಡರ್ ಕರೆದು ಕೆಲಸ ಮಾಡಬೇಕಾಗುತ್ತದೆ. ಲ್ಯಾಂಡ್ ಆರ್ಮಿಯವರು ಈ ಕೆಲಸ ಮಾಡಬೇಕಾದರೆ ಟೆಂಡರ್ ಕರೆಯುವಂತೆ ಇಲ್ಲ. ಈ ಕೆಲಸಕ್ಕೆ ಯಾವ ರೀತಿ ಎಸ್ಟಿಮೇಟ್ ಮಾಡಬೇಕು, ಎಂದು ತೀರ್ಮಾನಿಸಲು ಸಮಿತಿ ಇದೆ. ಆ ಸಮಿತಿಯಲ್ಲಿ ಪಂಚಾಯಿತಿ

ಸದಸ್ಯರು ಇದ್ದಾರೆ, ಇತರೆ ಜನರು ಇದ್ದಾರೆ. ಅವರ ಅನುಭವ ಪಡೆದು ಮಾಡಬೇಕಾಗುತ್ತದೆ. ಆ ಕಾರ್ಯಕ್ರಮದ ನಿರ್ವಹಣೆಯನ್ನು ಒಂದು ನಿರ್ಣಯದ ಮೂಲಕ ಎಲ್ಲರೂ ಒಪ್ಪಬೇಕಾಗುತ್ತದೆ. ಏಕೆಂದರೆ it is a loan guaranteed by the Government. It is not a loan directly given to the Village Panchayat. ಇದು ಗ್ರಾಮಕ್ಕೆ ಸೇರಿರತಕ್ಕಂಥ ಕಾರ್ಯಕ್ರಮ ಇದೆ. ನಾವು ಹಣ ಕೊಟ್ಟರೂ ಕೂಡ ಅದು ಗ್ರಾಮದ ಕಾರ್ಯಕ್ರಮ. ಕಾಂಟ್ರಿಬ್ಯೂಷನ್ ಇಲ್ಲದೇ ಅದನ್ನು ನಿರ್ವಹಣೆ ಮಾಡಲಿಕ್ಕೆ ಗ್ರಾಮಸ್ಥರು ಒಪ್ಪಬೇಕಾಗುತ್ತದೆ. ಗ್ರಾಮ ಸಭೆಯ ಮುಂದೆ ಇದನ್ನು ಇಡಬೇಕಾಗುತ್ತದೆ. ಎಲ್ಲರೂ ಆ ಕಾರ್ಯಕ್ರಮವನ್ನು ಒಪ್ಪಿದ ಮೇಲೆ ಆ ಕಾರ್ಯಕ್ರಮ ಪ್ರಾರಂಭ ಮಾಡಬೇಕಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ ಅವರು ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲ. ಸರ್ಕಾರ ಗ್ರಾಮದ ಹೆಸರಿನಲ್ಲಿ ಮಾಡುತ್ತದೆಯೋ? ಅವರು ಬರೀ ಸರ್ಕಾರ ಗ್ಯಾರೆಂಟಿ ಕೊಡುತ್ತದೆ ಎನ್ನುವ ಮಾತು ಹೇಳಿದರು. ಈ ಹಣವನ್ನು ಸರ್ಕಾರವೇ ಭರಿಸುತ್ತದೆಯೇ ಅಥವಾ ಸರ್ಕಾರ ಭರಿಸುತ್ತದೆಯೇ?

Sri.M.Y. Ghorpade:- The loan is guaranteed by the Government. It is being given via the Land Army.

ಶ್ರೀ ಎಸ್.ಎಸ್. ಪಾಟೀಲ್:- ರೀ ಪೇಮೆಂಟ್ ಮಾಡುವವರು ಯಾರು?

ಶ್ರೀ ಎಂ. ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಸರ್ಕಾರ ಗ್ಯಾರೆಂಟಿ ಕೊಟ್ಟ ಮೇಲೆ ಅದು ಸರ್ಕಾರದ ಜವಾಬ್ದಾರಿ ಆಗುತ್ತದೆ. ಇದರಲ್ಲಿ ಗ್ರಾಮದಿಂದ ರೀ ಪೇಮೆಂಟ್ ಮಾಡುವ ಪ್ರಶ್ನೆ ಬರುವುದಿಲ್ಲ. ಅದನ್ನು ನಿರ್ವಹಣೆ ಮಾಡಿದರೆ ಸಾಕು. ಅವರು 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟರೆ ಸಾಕು. ಸರ್ಕಾರ ಗ್ಯಾರೆಂಟ್ ಕೊಡದಿದ್ದರೆ ಹುಡ್ಕೋದವರು ಸಾಲ ಕೊಡುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್:- ಸರ್ಕಾರ ಗ್ಯಾರೆಂಟಿ ಕೊಟ್ಟಿದೆ. ಸಾಲ ವಾಪಸ್ಸು ಕೊಡುವವರು ಯಾರು?

ಶ್ರೀ ಎಂ.ವೈ. ಘೋರ್ಪಡೆ:- ಅದು ಸರ್ಕಾರದ ಜವಾಬ್ದಾರಿ ಆಗಿದೆ.

ಶ್ರೀ ಎಸ್.ಎಸ್.ಪಾಟೀಲ್:- ಅದು ಪಂಚಾಯತಿ ಜವಾಬ್ದಾರಿ ಆಗುವುದಿಲ್ಲ ತಾನೇ?

ಶ್ರೀ ಎಂ. ವೈ ಘೋರ್ಪಡೆ:- ಇಲ್ಲ. ಅವರದ್ದು ಎರಡು ಜವಾಬ್ದಾರಿ. ಅವರು 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು. ಮತ್ತು ಅದರ ನಿರ್ವಹಣೆ ಜವಾಬ್ದಾರಿಗೆ ಒಪ್ಪಬೇಕು. ಆ ಜವಾಬ್ದಾರಿ ಗ್ರಾಮ ಪಂಚಾಯತಿ ಮೇಲೆ ಬೀಳುವುದಿಲ್ಲ.

ಶ್ರೀ ಅರಗಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಈ ಯೋಜನೆಯಲ್ಲಿ 687 ಗ್ರಾಮಗಳನ್ನು ಈಗಾಗಲೇ ಗುರುತಿಸಿದ್ದೀರಿ. ಇದರಲ್ಲಿ ಮಲೆನಾಡಿನ ಗ್ರಾಮಗಳೂ ಬಹಳ ಕಡಿಮೆ ಇವೆ. ನಮ್ಮಲ್ಲಿ ಬಹಳ ಕಷ್ಟ, ರಸ್ತೆ ಬದಿಯಲ್ಲಿರತಕ್ಕಂಥ ಗ್ರಾಮಗಳು ಬಹಳ ಕಡಿಮೆ. ಗ್ರಾಮಂತರ ಅಂದರೆ ಬಯಲು ಸೀಮೆಯಲ್ಲಿ ಒಂದೂವರೆ ಎರಡು ಸಾವಿರ ಮನೆಗಳು ಇರುತ್ತವೆ. ನಮ್ಮಲ್ಲಿ ಒಂದು ಗ್ರಾಮ ಅಂದರೆ 150-200 ಮನೆಗಳು ಮಾತ್ರ ಇರುತ್ತವೆ. ಎರಡು ಲಕ್ಷ ರೂಪಾಯಿಗಳ ಕಾಂಟ್ರಿಬ್ಯೂಷನ್ ಸಂಗ್ರಹ ಮಾಡುವುದು

ಸ್ವಲ್ಪ ಕಷ್ಟವಾಗುತ್ತದೆ. ವೈಯಕ್ತಿಕವಾಗಿ ಯಾರಿಗೂ ಲಾಭ ಆಗುವುದಿಲ್ಲ. ಸಮುದಾಯಕ್ಕೆ ಲಾಭ ಆಗುತ್ತದೆ. ನಾವು ಈ ಬಗ್ಗೆ ಒಂದು ತಿಂಗಳಿನಿಂದ ಸರ್ಕಸ್ ಮಾಡುತ್ತಿದ್ದೇವೆ. ತೀರ್ಥಹಳ್ಳಿಯಲ್ಲಿ 5 ಗ್ರಾಮಗಳನ್ನು ಗುರುತಿಸುವುದು ಬಹಳ ಕಷ್ಟವಾಗಿದೆ ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇದನ್ನು ಏನದರೂ ಡಿವೈಡ್ ಮಾಡುತ್ತೀರಾ 10 ಲಕ್ಷ ರೂಪಾಯಿಗಳಿಗೆ ಒಂದೊಂದು ಯುನಿಟ್ ಮಾಡಿ ಅದರ 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕಟ್ಟಿ ಅಂತ ಹೇಳಿದರೆ ಅದನ್ನು ನಾವು ಕಟ್ಟುವುದಕ್ಕೆ ಸುಲಭವಾಗುತ್ತದೆ. ಆದ್ದರಿಂದ ಈ ನಿಬಂಧನೆಯನ್ನು ಮಲೆನಾಡಿಗೆ ಸ್ವಲ್ಪ ರಿಲ್ಯಾಕ್ಸ್ ಮಾಡಿದರೆ ನಮಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಎಂ. ವೈ ಘೋರ್ಪಡೆ:- ಮಾನ್ಯ ಅಧ್ಯಕ್ಷರೇ....

ಶ್ರೀ ಆರಗ ಜ್ಞಾನೇಂದ್ರ:- ಒಂದು ನಿಮಿಷ. ನಮ್ಮ ಪಂಚಾಯತಿಗಳು ತನ್ನದೆ ಆದಂತಹ ಕೆಲವು ಸೋರ್ಸ್ ಮಾಡಿಕೊಂಡಿವೆ. ಈಗ ಸಮುದಾಯದಿಂದ ಕಲೆಕ್ಟ್ ಮಾಡುವುದು ಸ್ವಲ್ಪ ಕಡಿಮೆ ಆದರೂ ಕೂಡ ಕಡಿಮೆ ಬಿದ್ದಿರತಕ್ಕಂಥಾದ್ದನ್ನು ನಾವು ಯಾವುದೋ ಒಂದು ನಿವೇಶನವನ್ನು ಮಾರಿ ಅಥವಾ ಒಂದು ಕಟ್ಟಡವನ್ನು ಪೋಸ್ಟ್ ಆಫೀಸ್‌ಗೆ ಕೊಟ್ಟು, ಅದರಿಂದ ಹಣ ಪಡೆದು ನಾವು ಕೊಡುತ್ತೇವೆ. ನಮ್ಮಲ್ಲಿ ಹಣ ಇದೆ. ಅದನ್ನು ನಾವು ಜಮಾ ಮಾಡುತ್ತೇವೆ ಅಂದರೆ ಅದನ್ನು ನಿಮ್ಮ ಜಿಲ್ಲಾ ಪಂಚಾಯತಿಯ ಚೀಪ್ ಎಕ್ಸಿಕ್ಯೂಟೀವ್ ಒಪ್ಪುತ್ತಿಲ್ಲ. ಈ ರೀತಿ ಪಂಚಾಯತಿಗಳು ತಮ್ಮ ಸೋರ್ಸ್‌ನಿಂದ ಕಲೆಕ್ಟ್ ಆಗಿರತಕ್ಕಂಥ ಹಣದಲ್ಲಿ ತಕ್ಷಣ 10 ಪರ್ಸೆಂಟ್ ಹಣವನ್ನು ಕಟ್ಟುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ?

ಶ್ರೀ ಎಂ. ವೈ ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಮಲೆನಾಡಿನ ಬಗ್ಗೆ ಹೇಳಬೇಕಾದರೆ ನಾನು ಮೊನ್ನೆ ತಾನೆ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಬಂದಿದ್ದೇನೆ. ಅಲ್ಲಿ ಹಣದ ಅಭಾವ ಇಲ್ಲ. ಅದು ನಮ್ಮ ರಾಜ್ಯದಲ್ಲಿ ಮುಂದುವರೆದ ಒಂದು ಜಿಲ್ಲೆ. ಈ 10 ಪರ್ಸೆಂಟ್ ಹಣ ಕೊಡುವುದಕ್ಕೆ ಅವರಿಗೇನೂ ತೊಂದರೆ ಇಲ್ಲ. ಆ ತೊಂದರೆ ಆಗಬಾರದು ಎನ್ನುವುದು ನನ್ನ ಅಭಿಪ್ರಾಯ ಒಂದು ತೊಂದರೆ ಆಗಬಹುದು. ಮಲೆನಾಡಿನಲ್ಲಿ ಗುಂಪು ಗುಂಪಾಗಿ ಮನೆಗಳನ್ನು ಕಟ್ಟಿಲ್ಲ. ಅದನ್ನು ಎಲ್ಲಾ ಕಡೆ ಹಂಚಿದ್ದಾರೆ. ಒಂದೇ ಕಡೆ ಗುಂಪು ಮನೆಗಳು ಕಾಣಿಸುವುದಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು, ಈ ಕಾರ್ಯಕ್ರಮ ಎಲ್ಲೆಲ್ಲಿ ಬೇಕು ಅದನ್ನು ಹಂಚಿಕೊಂಡರೆ ಏನೂ ಆಕ್ಷೇಪಣೆ ಬರುವುದಿಲ್ಲ. ಉದಾಹರಣೆಗಾಗಿ ಕೆಲವು ಕಡೆ ಕೆಲವೇ ಮನೆಗಳು ಇರುತ್ತವೆ. ಅವರು ನಮಗೆ ಬರೀ ರಸ್ತೆ ಕಾರ್ಯಕ್ರಮ ಬೇಕು, ಚರಂಡಿ ಕಾರ್ಯಕ್ರಮ ಬೇಕು, ಬೇರೆ ಕಾರ್ಯಕ್ರಮಗಳು ಬೇಕಾಗಿಲ್ಲ, ಅಂದರೆ ಅಂತಹ ಕಡೆ, ಅದನ್ನು ಸೇರಿಸಬಹುದು. ಬೇರೆ ಬೇರೆ ಕಡೆ ಈ ಕಾರ್ಯಕ್ರಮಗಳನ್ನು ಹಂಚಿ, ಮಾಡುವುದಕ್ಕೆ ಅವಕಾಶ ಇದೆ ಆ ರೀತಿಯಲ್ಲಿ ಮಾಡಬೇಕು ಏಕೆಂದರೆ 20 ಲಕ್ಷ ರೂಪಾಯಿಗಳನ್ನು ಒಂದೇ ಗುಂಪಿನಲ್ಲಿ ಆದರೂ ಕೂಡ ಈ ತತ್ವಕ್ಕೆ ಅಡ್ಡಿ ಬರುವುದಿಲ್ಲ. ಈಗ 20 ಲಕ್ಷ ಇದೆ, ಬೇಡ, ನಾವು 10 ಲಕ್ಷ ಖರ್ಚು ಮಾಡುತ್ತೇವೆ ಅಂದರೆ ಮಾಡಿ, ಆಗ ಕಾಂಟ್ರಿಬ್ಯೂಷನ್ ಒಂದು ಲಕ್ಷ ಆಗುತ್ತದೆ. ಎರಡು ಲಕ್ಷ ರೂಪಾಯಿ ಕಾಂಟ್ರಿಬ್ಯೂಷನ್ ಆಗುವುದಿಲ್ಲ. ಈ ರೀತಿಯ ಫ್ಲೆಕ್ಸಿಬಿಲಿಟಿ ಏನು ಇದೆ ಅದನ್ನು ಮಾಡಲಿಕ್ಕೆ ಅವಕಾಶ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಇದು ಸ್ವಚ್ಛ ಗ್ರಾಮ ಯೋಜನೆ ಮಾಡುತ್ತೇವೆಂದು ಕಳೆದ ವರ್ಷದ ಬಜೆಟ್‌ನಲ್ಲಿ ಹೇಳಿರತಕ್ಕಂಥ ಕಾರ್ಯಕ್ರಮ. ಈ ವರ್ಷದ ಬಜೆಟ್‌ನ್ನು ಮಾರ್ಚಿನಲ್ಲಿ ಮಂಡನೆ ಮಾಡುವವರಿದ್ದಾರೆ. ಹುಡ್ಕೋ ಸಾಲ ಕೊಡುವುದು ಯಾವಾಗ? ಯಾವ ತಿಂಗಳಿನಿಂದ ಕಾರ್ಯಕ್ರಮ ಪ್ರಾರಂಭವಾಗುತ್ತದೆಂದು ಮಾನ್ಯ ಮಂತ್ರಿಗಳು ತಿಳಿಸುವುದಕ್ಕೆ ಸಾಧ್ಯವೇ?

ಶ್ರೀ ಎಂ. ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೆ, ಹುಡ್ಕೋದಿಂದ ಹಣ ಬರುವುದಕ್ಕೆ ಕೆಲವು ತಿಂಗಳುಗಳು ತಡೆ ಆಯಿತು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈಗ ಅವರು ಹಣ ಕೊಡಲಿಕ್ಕೆ ಒಪ್ಪಿದ್ದಾರೆ. ಹಾಗೆಯೇ ನಮ್ಮ ಬಜೆಟ್‌ನಲ್ಲಿ 20 ಕೋಟಿ ರೂ.ಗಳ ಹಣವು ಇದ್ದೇ ಇದೆ. ಆದಕಾರಣ ಕೆಲಕಡೆಗಳಲ್ಲಿ ನಾವು ಆ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದರಲ್ಲಿ ಯಾವ ತೊಂದರೆಯೂ ಇಲ್ಲ. ಆ ಕುರಿತು ಎಲ್ಲಾ ಗ್ರಾಮಗಳ ಹೆಸರುಗಳು ಕೂಡ ಇನ್ನೂ ತೀರ್ಮಾನವಾಗಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯ ರೀತ್ಯಾ ಜಿಲ್ಲಾ ಪಂಚಾಯತ್‌ಗಳಲ್ಲಿ ಅದು ತೀರ್ಮಾನವಾಗ- ಬೇಕಾಗಿದೆ. ಪ್ರಕ್ರಿಯೆಯು ಪ್ರಾರಂಭವಾಗಲಿ.....

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಾನು ಏತಕ್ಕಾಗಿ ಈ ವಿಷಯವನ್ನು ಕೇಳುತ್ತಿದ್ದೇನೆ? ಕಳೆದ ಬಜೆಟ್‌ನಲ್ಲಿ ಸ್ವಸ್ತಿ ಗ್ರಾಮಗಳನ್ನು ತೆಗೆದುಕೊಂಡಿದ್ದೇವೆಂದು 20 ಕೋಟಿ ರೂಪಾಯಿಗಳನ್ನು ನೀವು ಇಟ್ಟಿದ್ದೀರಿ. ಆ 20 ಕೋಟಿಗಳು ಇಲ್ಲಿಯವರೆಗೂ ಬಿಡುಗಡೆಯಾಗಿಲ್ಲ. ಅದಕ್ಕಾಗಿಯೇ ನಾನುನಿಮ್ಮ ಪರ್‌ಫಾರ್‌ಮೆನ್ಸ್ ಬಜೆಟ್‌ನ್ನು ಕೇಳಿರುವುದು. ನಾವೀಗ 2001ನೇ ಫೆಬ್ರವರಿ- ಮಾರ್ಚ್ ತಿಂಗಳಲ್ಲಿದ್ದೇವೆ. ನಾವು ಇದನ್ನು ಡಿಸೆಂಬರ್ ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೋ ಅಥವಾ 2002ನೇ ಇಸವಿಯಲ್ಲಿಯೋ ಎಂಬುದನ್ನು ನಮಗೆ ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಒಂದು ದೃಷ್ಟಿಯಲ್ಲಿ ನೋಡಿದರೆ ಕಾರ್ಯಕ್ರಮವು ಈಗಾಗಲೇ ಪ್ರಾರಂಭವಾಗಿದೆ. ಹಣವನ್ನು ಯಾವಾಗ ಬಿಡುಗಡೆ ಮಾಡುವಿರಿ ಎಂಬುವುದು ತಮ್ಮ ಪ್ರಶ್ನೆಯಾದರೆ, ಯಾವಾಗ ಈ ಕಾರ್ಯಕ್ರಮದ ಚೌಕಟ್ಟು, ಎಸ್ಟಿಮೇಟ್ ತಯಾರಾಗುತ್ತದೊ, ಸಂಬಂಧಪಟ್ಟ ಕಮಿಟಿಯಿಂದ ಅಪ್ರೂವ್ ಆಗುತ್ತದೋ, ಏಜೆನ್ಸಿ ಫಿಕ್ಸ್ ಆಗುತ್ತದೋ, ಆಗ ಏಜೆನ್ಸಿ ಮುಖಾಂತರ ಕೆಲಸ ಪ್ರಾರಂಭವಾಗುತ್ತದೆ. ಸೆಲೆಕ್ಷನ್ ಪ್ರೊಸೆಸ್ ಇನ್ನೂ ಪೂರ್ತಿಯಾಗಿಲ್ಲ.....

ಅಧ್ಯಕ್ಷರು:- ಕೆಲವು ಕಡೆ ಪ್ರಾರಂಭವಾಗಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ಮಂಚನಬೆಲೆಯಲ್ಲಿ ನನಗೆ ಗೊತ್ತಿರುವ, ಹಾಗೆ ಪ್ರಾರಂಭವಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನನ್ನ ಉದ್ದೇಶವನ್ನು ತಾವುಗಳು ಅರ್ಥ ಮಾಡಿಕೊಳ್ಳಬೇಕೆಂದು ಪ್ರಾರ್ಥನೆ. ಉದ್ದೇಶವನ್ನು ಅರ್ಥಮಾಡಿಕೊಂಡಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು:- ನಾನು ಹೇಳಿದ ಮಂಚಿನಬೆಲೆ, ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಸೇರಿದ್ದು.

(ಹಲವಾರು ಸನ್ಮಾನ್ಯ ಸದಸ್ಯರುಗಳವರು ಎದ್ದುನಿಂತು ಅವಕಾಶಕ್ಕಾಗಿ ಕೋರಿದರು)

ಅಧ್ಯಕ್ಷರು:- ತಾವುಗಳು ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಸಮಯಾವಕಾಶವನ್ನು ಗಮನಿಸಬೇಕು. ತಾವುಗಳು ಅವಕಾಶ ಕೋರುತ್ತಿರುವ ಪ್ರಶ್ನೆಯು ಬಹಳ

ಮುಖ್ಯವಾದುದು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಈಗ ನಾವು ಇದೇ ಪ್ರಶ್ನೆಯನ್ನು ಇನ್ನೂ ಹತ್ತು ನಿಮಿಷಗಳ ಮುಂದುವರಿಸಿ ಮುಗಿಸೋಣವೆ? ಅಥವಾ ಪ್ರಮುಖವಾದ ಈ ವಿಚಾರವನ್ನು ಅರ್ಧಗಂಟೆಯ ಕಾಲಾವಧಿಯ ವಿಷಯವನ್ನಾಗಿರಿಸಿಕೊಂಡು ಚರ್ಚೆಗೆ ಅವಕಾಶ ಕೊಡೋಣವೇ ಎಂಬುದನ್ನು ತಾವುಗಳೇ ನಿರ್ಧರಿಸಿ ಹೇಳಿ. ಮಾನ್ಯ ಸದಸ್ಯರುಗಳಲ್ಲಿ ಯಾರಾದರೂ ಒಬ್ಬರು ಲಿಖಿತ ಮೂಲಕ ಪ್ರಸ್ತಾವನೆಗಾಗಿ ಬರೆದು ಕಳುಹಿಸಬೇಕು. ನಾನೇ ನಿರ್ಧಾರವನ್ನು ತೆಗೆದುಕೊಳ್ಳುವಂತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅರ್ಧಗಂಟೆ ಕಾಲಾವಧಿಯ ಪ್ರಸ್ತಾವನೆಗೆ ತಾವುಗಳು ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಅಧ್ಯಕ್ಷರು:- ಈ ಪ್ರಮುಖವಾದ ವಿಚಾರವನ್ನು ಅರ್ಧಗಂಟೆ ಕಾಲಾವಧಿಯ ಪ್ರಸ್ತಾವನೆಯಾಗಿ ತೆಗೆದುಕೊಳ್ಳಬಹುದು.

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ದೈಹಿಕ ಶಿಕ್ಷಕರುಗಳಿಗೆ ಮುಂಬಡ್ತಿ

80 (784) ಶ್ರೀ ಜಯಪ್ರಕಾಶ್ ಹೆಗಡೆ ಕೆ. ಬ್ರಹ್ಮಾವರ):- ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1. ರಾಜ್ಯದಲ್ಲಿ ಖಾಸಗಿ ಮತ್ತು ಸರಕಾರದ ಪ್ರೌಢಶಾಲೆಗಲ್ಲಿ ಸತತವಾಗಿ ಸೇವೆ ಸಲ್ಲಿಸುತ್ತಿದ್ದ ದೈಹಿಕ ಶಿಕ್ಷಕರಿಗೆ ಪದೋನ್ನತಿ ಇಲ್ಲದಿರುವುದು ನಿಜವಲ್ಲವೆ ಈ ಶಿಕ್ಷಕರಿಗೆ ಬಡ್ತಿಯನ್ನೊಳಗೊಂಡಂತೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರಕಾರದವರು ಈಗಾಗಲೇ ನಿರ್ಧರಿಸಿರುವುದು ನಿಜವಲ್ಲವೆ (ವಿವರ ನೀಡುವುದು)

2. ಸದರಿ ಪ್ರೌಢ ಶಾಲೆಗಳಲ್ಲಿನ ದೈಹಿಕ ಶಿಕ್ಷಕರಿಗೆ ಗ್ರೇಡ್-1 ಮತ್ತು ಗ್ರೇಡ್-2 ಎಂದು ಬಡ್ತಿ ಸೌಲಭ್ಯಗಳನ್ನು ವಿಂಗಡಿಸಲಾಗಿದೆಯೇ? (ವೇತನ ಶ್ರೇಣಿ ಸಹಿತ ಗ್ರೇಡ್-1 ಮತ್ತು ಗ್ರೇಡ್-2 ದೈಹಿಕ ಶಿಕ್ಷಕ ಶ್ರೇಣಿಯ ಬಡ್ತಿ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)

3. ಸರ್ಕಾರದ ಪ್ರೌಢಶಾಲೆಗಳಲ್ಲಿನ ದೈಹಿಕ ಶಿಕ್ಷಕರಿಗೆ ಒದಗಿಸಿರುವ ಬಡ್ತಿ ಸೌಲಭ್ಯಗಳನ್ನು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುವ ದೈಹಿಕ ಶಿಕ್ಷಕರಿಗೆ ವಿಸ್ತರಿಸುವ ಬಗ್ಗೆ ಸರ್ಕಾರದ ಕ್ರಮಗಳೇನು? (ನಿವರಗಳನ್ನು ನೀಡುವುದು)

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಪ್ರೌಢಶಿಕ್ಷಣ ಸಚಿವರು):-

1. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿ.ಪಿ.ಇಡಿ ಪದವಿಯನ್ನು ಹೊಂದಿರುವ ಗ್ರೇಡ್-2 ದೈಹಿಕ ಶಿಕ್ಷಕರಿಗೆ ಸೇವಾ ಜೇಷ್ಠತೆಯನ್ನು ಆಧರಿಸಿ ಗ್ರೇಡ್-1 ದೈಹಿಕ ಶಿಕ್ಷಕರಾಗಿ ವೃಂದ ಮತ್ತು ನೇಮಕಾತಿ ನಿಯಮದಂತೆ ಬಡ್ತಿ ನೀಡಲಾಗುತ್ತಿದೆ. ಅದೇ ರೀತಿ ಗ್ರೇಡ್-1 ದೈಹಿಕ ಶಿಕ್ಷಕರಿಗೆ ಹಿರಿಯ ಗ್ರೇಡ್-1 ದೈಹಿಕ ಶಿಕ್ಷಕರಾಗೂ ಬಡ್ತಿ ನೀಡಲು ಸರ್ಕಾರಿ ಆದೇಶವಾಗಿದೆ. ಈ ಬಗ್ಗೆ ವೃಂದ ತಿದ್ದುಪಡಿ ತಂದ ನಂತರ ಬಡ್ತಿ ನೀಡಲಾಗುವುದು.